ಇಲ್ಲವೋ ಅನ್ನುವ ಪ್ರಶ್ನೆ ಮನಸ್ಸಿನಲ್ಲಿರುವಾಗಲೇ ಅನಿರುದ್ಧ ಅವನನ್ನು ಒಂದು ಪ್ರಶ್ನೆಕೇಳಿದ...

"ನೀನ್ಯಾಕೆ ಒಐಸಿ ಕಾರ್ಡು ಮಾಡಿಸಬಾರದು? ಆ ಕಾರ್ಡು ಕೊಡುವುದಕ್ಕೆ ಮುನ್ನ ಎಲ್ಲ ಇಲಾಖೆಯವರೂ ದೀರ್ಘ ತಪಾಸಣೆ ಮಾಡಿಯೇ ಕೊಡುವುದರಿಂದ, ಮತ್ತು ಓಟು ಹಕ್ಕು ಬಿಟ್ಟು ಒಟ್ಟಾರೆ ಭಾರತದ ಪ್ರಜೆಯಂತೆಯೇ ನಿನ್ನನ್ನು ಟ್ರೀಟ್ ಮಾಡುವುದರಿಂದ ನಿನಗೂ ಒಂದು ಹೋಗಿ ಆಗಲು ಅನುಕೂಲವಾಗುತ್ತದೆ" ಎಂದಿದ್ದ.

ಪರಿಗಣಿಸುತ್ತೇನೆ ಎಂದಷ್ಟೇ ಅಖ್ತರ ಹೇಳಿದ. ಅವನ ಮನಸ್ಸಿನಲ್ಲಿ ಎಲ್ಲ ಇಲಾಖೆಯವರೂ ದೀರ್ಘ ತಪಾಸಣೆ ಮಾಡುತ್ತಾರೆ ಎನ್ನುವ ಅನಿರುದ್ಧನ ಮಾತು ಕೊಕ್ಕಿ ಹಾಕಿ ನಿಲ್ಲಿಸಿತು.

ಅವನು ನೈರೋಬಿಗೆ ವಾಪಸ್ಸಾದ ನಂತರವೂ ಅಧಿಕಾರಿಗಳು ಅವನ ಬಗ್ಗೆ ವಿಚಾರಿಸಲು ಒಂದು ದಿನ ಬಂದಿದ್ದರು. "ಜಸ್ಟ್ ಎ ಕ್ಲೋಷರ್, ನಂಥಿಂಗ್ ಎಲ್ಸ್" ಎಂದು ಹೇಳಿದರಾದರೂ, ಅನಿರುದ್ಧನಿಗೂ, ಅವನ ಅಪಾರ್ಟ್‌ಮೆಂಟಿನವರಿಗೂ ಎಲ್ಲಕ್ಕಿಂತ ಮುಖ್ಯವಾಗಿ ಅನಿರುದ್ಧನ ಹೆಂಡತಿ ಕವಿತಾಳಿಗೂ ತುಸು ಅಸಮಾಧಾನವನ್ನುಂಟು ಮಾಡಿತ್ತು. ಗೌರವಸ್ಥರ ಮನೆಗೆ ಪೊಲೀಸರು ಒಬ್ಬ ಅತಿಥಿಯ ಬಗ್ಗೆ ವಿಚಾರಣೆ ನಡೆಸುವುದು ಸಹಜವೂ–ಸಾಮಾನ್ಯವೂ ಆಗಿರಲಿಲ್ಲ.

ಅಖ್ತರ್ ಬೆಂಗಳೂರಿನಿಂದ ಮುಂಬಯಿ ಮಾರ್ಗವಾಗಿ ನೈರೋಬಿಗೆ ಹೊರಟಾದ ಮೇಲೆ ಗಂಡಹೆಂಡತಿ ಮಾತಾಡಿಕೊಂಡಿದ್ದರು.

"ಅನಿರುದ್ಧ... ಪೊಲೀಸರು ಬಂದು ಎರಡೆರಡು ಬಾರಿ ವಿಚಾರಿಸಿ ಹೋದರಲ್ಲಾ... ಏನಿರಬಹುದು?" ಎಂದು ಕವಿತಾ ಕೇಳಿದಳು. ಅವನು ಬಂದು ಹೋದ ಒಂದು ತಿಂಗಳು ದಾಟಿದರೂ ಈ ಪ್ರಶ್ನೋತ್ತರ ಅವರ ನಡುವೆ ನಡೆಯುತ್ತಲೇ ಇತ್ತು... "ನನಗೆ ಗೊತ್ತಿಲ್ಲ. ರೊಟೀನ್ ವಿಚಾರಣೆ ಅನ್ನುತ್ತಿದ್ದಾರೆ. ಅವನ ಪಾಸ್‌ಪೋರ್ಟು, ಅವನ ಧರ್ಮ, ಅವನ ದಿರಿಸು, ನಡೆನುಡಿಗಳು ಯಾರ ಗಮನವನ್ನಾದರೂ ಸೆಳೆಯುತ್ತದೆ. ಇದರಲ್ಲಿ ನಾವು ಹೆಚ್ಚಿನ ಅರ್ಥವನ್ನು ಹುಡುಕಬಾರದು. ಎಷ್ಟಾದರೂ ಅವನು ನನ್ನ ಕ್ಲಾಸ್ಮೇಟಾಗಿದ್ದನಲ್ಲದೇ, ಬೆಸ್ಟ್ ಫ್ರೆಂಡ್ ಕೂಡಾ ಆಗಿದ್ದ."

"ಆದರೂ... ವೈ ಡಸ್ ಹಿ ನಾಟ್ ಡ್ರೆಸ್ ನಾರ್ಮಲಿ. ನಮ್ಮ ಗೆಳೆಯರಲ್ಲಿ ಎಷ್ಟು ಜನ ಬಿಲೀವರ್ಸ್, ರಿಲಿಜಿಯಸ್ ಟೈಪ್ಸ್ ಇದ್ದಾರೆ. ಬಟ್ ನೋಬಡಿ ವೇರ್ಸ್ ಇಟ್ ಆನ್ ದೆಯರ್ ಸ್ಲೀವ್... ಇದು ಅತೀ ಅಂತ ನಿನಗನ್ನಿಸಲಿಲ್ಲವಾ... ಅದು ಹಾಗಿರಲಿ... ಯುವ್ ಹ್ಯಾವ್ ನಾಟ್ ಬೀನ್ ಇನ್ ಟಚ್ ವಿಥ್ ಹಿಂ ರೆಗ್ಯುಲರ್ಲಿ. ನಿನಗೆ ಅವನು ಈಚಿನ ವರ್ಷಗಳಲ್ಲಿ ಏನು ಮಾಡುತ್ತಿದ್ದಾನೆಂದು ವಿವರವಾಗಿ ತಿಳಿದಿದೆಯಾ... ಲೈಟ್ ಎಂಜಿನಿಯರಿಂಗ್ ಅನ್ನಬೇಡ... ನೆಫೇರಿಯಸ್ ಆಕ್ಟಿವಿಟಿ ಮಾಡುವ ಪ್ರತಿಯೊಬ್ಬನಿಗೂ ಒಂದು ಫ್ರಂಟ್ ಇರುತ್ತದೆ. ನಂಗ್ಯಾಂಕೋ ಡೌಟು..."

ಹೀಗಾಗಿ ಅಖ್ತರನ ಜೊತೆ ಹೇಗೆ ವ್ಯವಹರಿಸಬೇಕು ಎನ್ನುವುದರ ಬಗ್ಗೆ ಅನಿರುದ್ಧ ಒಂದು ನಿಲುವನ್ನು ತೆಗೆದುಕೊಳ್ಳಬೇಕಾಗಿತ್ತು. ಅನಿರುದ್ಧನ ಹೆಂಡತಿ ಕವಿತಾ ಅಂತೂ – ತನ್ನ ಅನುಮಾನವನ್ನು ಬಹಿರಂಗವಾಗಿಯೇ ವ್ಯಕ್ತಪಡಿಸಿದ್ದಳು. "ನಿಮ್ಮ ಸ್ನೇಹ ನಿಮ್ಮಲ್ಲಿರಲಿ, ಆದರೆ ಅದರ ಫಲವಾಗಿ ಠಾಣೆಯ ಅಧಿಕಾರಿಗಳು ಮನೆಗೆ ಬರುವಂತಾಗಬಾರದು" ಎಂದು ಖಡಾಖಂಡಿತವಾಗಿ ಆಕೆ ಅನಿರುದ್ಧನಿಗೆ ಹೇಳಿದ್ದಳು.

ಅನಿರುದ್ಧ ಅಖ್ತರನನ್ನು ಸಮರ್ಥಿಸಲು ಪ್ರಯತ್ನಿಸಿದ. "ಆದರೆ ಏನೂ ಇಲ್ಲದೇ ಪೊಲೀಸರು ಯಾಕೆ ಅಷ್ಟು ಬಾರಿ ವಿಚಾರಣೆ ನಡೆಸುತ್ತಾರೆ?" ಎನ್ನುವ ಕವಿತಾಳ ಪ್ರಶ್ನೆಗೆ ಅವನಲ್ಲಿ ಉತ್ತರವಿರಲಿಲ್ಲ. ಮಾತ್ರವಲ್ಲ, ಮಾತು ಮುಂದುವರೆಯುತ್ತಾ ಅವನಿಗೇ ಅನುಮಾನಗಳು ಬರತೊಡಗಿದವು. ಮಾತು ಮಾತಿನಲ್ಲೇ ಕವಿತಾ ಅಖ್ತರನ ಬಗ್ಗೆ ಒಂದು ಲಿಸ್ಟನ್ನೇ ತಯಾರಿಸಿದ್ದಳು. "ಕಬಾಬು ತಿನ್ನಿಸಿದ್ದು ಒಂದು. ಕುಸುರಿ ಟೋಪಿ ಹಾಕಿದ್ದು, ನಮಾಜು ಮಾಡುವಾಗ ಪಕ್ಕದಲ್ಲಿ ಮಂಡಿಯೂರಿಸಿಕೊಂಡದ್ದು